ಎಂದು ಹೇಳುತ್ತೀರಿ. ಈಗ ಒಂದು ವರ್ಷದಿಂದ ನಿಮ್ಮ ಸರ್ಕಾರ ಬಂದಮೇಲೆ ಏತಕ್ಕೆ ರಿಕ್ರೂಟ್ ಮಾಡಲಿಲ್ಲ? ಹಾಗಿದ್ದರೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿ. ತಾವು ಹೇಳುತ್ತೀರಿ ಅಂದರೆ ನಾನೂ ಸಹ ಹೇಳಬೇಕಾಗುತ್ತದೆ ನೀವು ಟೈಮ್‌ಬಾಂಡ್ ಪ್ರಮೋಷನ್ ಆದರೂ ಕೊಡಿ, ರಿಕ್ರೂಟ್‌ಮೆಂಟ್ ಆದರೂ ಮಾಡಿಕೊಳ್ಳಿ. ಆದರೆ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಮ್ ಏನಿದೆ ಅದು ಸಫರ್ ಆಗುತ್ತಿದೆ ಇದಂ ಏಕೆ ಎನ್ನುವುದನ್ನು ನಿಮಗೆ ಹೇಳುತ್ತೇನೆ. ಮೇಲುಗಡೆ ಇರತಕ್ಕಂಥ ಜನ ಯಾರು ಇದ್ದಾರೆ, ಅವರು ಹೋಗಿ ರಿವ್ಯೂ ಮಾಡಬೇಕು. ಏಕೆ ಮಾಡಲಿಲ್ಲ ಎಂದು ಅವರಿಗೆ ಹೋಗಿ ಕೇಳಬೇಕು. ಟಾರ್ಗೆಟ್ ಫಿಕ್ಸ್ ಮಾಡಿದ್ದರೂ ನೀವು ಏಕೆ ರೀಚ್ ಆಗಲಿಲ್ಲ ಅಂತ ಅವರನ್ನು ಕೇಳಬೇಕು. ಆದರೆ ಆದನ್ನು ಒಂದು ವರ್ಷದಿಂದ ಯಾರೂ ಮಾಡುತ್ತಿಲ್ಲ. ಆದನ್ನು ಮಾಡುವುದಕ್ಕೆ ಸಾಧ್ಯವೇ ಎಂದೂ ನಾನು ನಿಮ್ಮನ್ನು ಕೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವೇನೂ ಡಂಗೂರ ಹೊಡೆಯುತ್ತಿಲ್ಲ. ಇನ್ನೂ ಐದೂನೂರು ಜನ ಡಾಕ್ಟರುಗಳು ಬೇಕು ಎಂದು ಹೇಳಿ ಪಿ.ಎಸ್.ಸಿ.ಯವರಿಗೆ ಕಳಿಸಿ ಕೊಟ್ಟಿದ್ದೇವೆ. They are taking their own sweet time. ಮೊನ್ನೆ ದಿವಸ ತಮಗೆ ಗೊತ್ತಿರುವ ಹಾಗೆ ನಾನು ಹೇಳಿದೆ, ಏನಾದರೂ ಆಪರು ಬೇಗ ಡಾಕ್ಟರುಗಳನ್ನು ರಿಕ್ರೂಟ್ ಮಾಡಿಕೊಡದೇ ಹೋದರೆ, ನಾನು ಕಾಂಟ್ರಾಕ್ಟ್ ಮೂಲಕ ಬೇರೆಯವರನ್ನು ತೆಗೆದುಕೊಂಡು ಅಲ್ಲಲ್ಲಿ ಪೋಸ್ಟ್ ಮಾಡುತ್ತೇನೆ ಎಂದು ಹೇಳಿದ್ದೇನೆ. ಮೊನ್ನೆ ದಿವಸ ಆವರು ನಮಗೆ ಇನ್ನು ಒಂದು ತಿಂಗಳೊಳಗೆ ಡಾಕ್ಟರ್‌ಗಳನ್ನು ಸೆಲೆಕ್ಟ್ ಮಾಡಿ ಕೊಡುತ್ತೇವೆ ಎಂದು ಹೇಳಿದ್ದಾರೆ ಮತ್ತು ಜಾಹೀರಾತನ್ನು ಕೊಟ್ಟಿದ್ದಾರೆ. ಆದ್ದರಿಂದ ಇದಕ್ಕೆ ಡಂಗೂರ ಹೊಡೆಸಬೇಕಾದ ಆವಶ್ಯಕತೆ ಇಲ್ಲ. This is a necessity and this family planning programme is a national programme. ಇದಂ ನನಗೆ ಗೊತ್ತಿದೆ. ಆದ್ದರಿಂದ ಇನ್ನು ಮುಂದೆ ತಾವು ಹೇಳಿದ್ದನ್ನೆಲ್ಲಾ ನಾನು ನಿಗಾದಲ್ಲಿಟ್ಟು ಕೊಂಡು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ.—ಅಸಿಸ್ಟೆಂಟ್ ಸರ್ಜನ್‌ಗಳ ಒಂದು ನ್ಯಾಯಬದ್ಧವಾದ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಸರ್ಕಾರಕ್ಕೆ ಏನು ತೊಂದರೆ ಇದೆ? ೨೦ ವರ್ಷಗಳಾದರೂ ಆವರಿಗೆ ಏನೊಂದೂ ಪ್ರಮೋಷನ್ ಇಲ್ಲ, ಮತ್ತೊಂದಿಲ್ಲ. ಆದ್ದರಿಂದ ಅವರು ಸ್ವಲ್ಪ ದಿವಸ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಮ್‌ನಲ್ಲಿ ಇನ್‌ವಾಲ್ವ್ ಆಗುವುದಿಲ್ಲ ಎಂದು ಹೇಳಿ ಅದನ್ನು ನಿಲ್ಲಿಸಿದ್ದು ನಿಜ.

ಶ್ರೀ ಕೆ. ಎಸ್. ನಾಗರತ್ನಮ್ಮ.—ತಾವು ಕೇಳಿದ್ದನ್ನು ನಾನು ಅರ್ಥ ಮಾಡಿಕೊಳ್ಳಲಿಲ್ಲ. ಮತ್ತೊಮ್ಮೆ ಕೇಳಿ.

ಶ್ರೀಮತಿ ದಮಯಂತಿ ಬೋರೇಗೌಡ.—ಅಸಿಸ್ಟೆಂಟ್ ಸರ್ಜನ್ಸ್, ಅವರ ಕೆಲವು ನ್ಯಾಯಬದ್ಧವಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಸುಮಾರು ವರ್ಷಗಳಿಂದ ಅವರು ತಮ್ಮ ಜೊತೆಯಲ್ಲಿ, ಇದರ ಬಗ್ಗೆ ವ್ಯವಹರಿಸುತ್ತಿದ್ದಾರೆ. ಈ ನ್ಯಾಯಬದ್ಧವಾದ ಬೇಡಿಕೆಗಳು, ಪ್ರಮೋಶನ್ ಕೊಡುವುದಾಗಲೀ, ಮತ್ತೊಂದಾಗಲೀ ಇದ್ದರೆ, ಅದನ್ನು ಒದಗಿಸಿ ಕೊಡುವುದರಲ್ಲಿ ಸರ್ಕಾರಕ್ಕೆ ಏನಂ ತೊಂದರೆ ಇದೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಮಗೆ ಗೊತ್ತಿರುವ ಹಾಗೆ ಹಣಕಾಸಿನ ತೊಂದರೆಯೇ ಇದ್ದದ್ದು.

ಪ್ರಶ್ನೆ.—೪೩(೧೫೫) ಮಾನ್ಯ ಸದಸ್ಯರಾದ ಶ್ರೀ ಸಿ. ಬೈರೇಗೌಡ ಆವರು ಗೈರುಹಾಜರು)

ಬೈಂದೂರು ಕ್ಷೇತ್ರದಲ್ಲಿ ಆಸ್ಪತ್ರೆಗಳಿಗೆ ವೈದ್ಯರ ನೇಮಕ

೨೨೩. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಕ್ಷೇತ್ರವ ಕೊಲ್ಲೂರು, ಹಳ್ಳಿಹೊಳೆ, ಹಕ್ಲಾಡಿ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಬಹುಕಾಲದಿಂದ ಇಲ್ಲದಿರುವುದು ಬೈಂದೂರಿನಲ್ಲಿ ಮಹಿಳಾ ವೈದ್ಯರು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ ಖಾಲಿ ಇರುವ ಸ್ಥಾನ ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಆಸ್ಪತ್ರೆಗಳಲ್ಲಿ ವೈದ್ಯರ ಖಾಲಿಯಾದ ಸ್ಥಾನ ತುಂಬಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು.)

ಅ) ಹೌದು

ಆ) ಕರ್ನಾಟಕ ಲೋಕ ಸೇವಾ ಆಯೋಗ ಖಾಲಿ ಇರುವ ೩೫೬ + ೧೭೩ ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಈಗಾಗಲೇ ಕ್ರಮ ತೆಗೆದುಕೊಂಡಿದೆ. ಸೂಕ್ತ ಅಭ್ಯರ್ಥಿಗಳ ಆಯ್ಕೆಯಾದ ಕೂಡಲೇ ಆದ್ಯತೆಯ ಮೇರೆಗೆ ಈ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲಾಗುವುದು.

ಇ) ಹೌದು

ಶ್ರೀ ಜಿ.ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ನಾಲ್ಕು ಆಸ್ಪತ್ರೆಗಳಲ್ಲಿ ವೈದ್ಯರುಗಳು ಇಲ್ಲ.

ಅಧ್ಯಕ್ಷರು.—ನಿಮ್ಮ ಕ್ಷೇತ್ರದಲ್ಲಿ ಒಟ್ಟು ಎಷ್ಟು ಆಸ್ಪತ್ರೆಗಳಿವೆ?

ಶ್ರೀ ಜಿ.ಎಸ್. ಆಚಾರ್.—ನಾಲ್ಕು ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ. ಕಳೆದ ಐದು ವರ್ಷಗಳಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಲೇ ಇದ್ದೇನೆ. ಸರ್ಕಾರದ ಮೇಲೆ ಸರ್ಕಾರ ಬರುತ್ತದೆ. ಮಂತ್ರಿಗಳ ಮೇಲೆ ಮಂತ್ರಿಗಳು ಬಂದಿದ್ದಾರೆ. ಆಶ್ವಾಸನೆಗಳ ಮೇಲೆ ಆಶ್ವಾಸನೆಗಳು ಬಂದಿವೆ. ಏನೆಂದರೆ ಸೂಕ್ತ ಅಭ್ಯರ್ಥಿಗಳನ್ನು ಸರಿಯಾದ ಸಮಯದಲ್ಲಿ ನೇಮಕ ಮಾಡಲಾಗುವುದು. ಭರ್ತಿ ಮಾಡಲಾಗುವುದು. ಎಂದು, ನನ್ನ ಕ್ಷೇತ್ರದ ನಾಲ್ಕು ಆಸ್ಪತ್ರೆಗಳೂ ಹಾಗೆಯೇ ಇವೆ. ಈ ಬಾರಿಯಾದರೂ ಆದೀತೆ? ಇದು ಒಂದು. ಎರಡನೇಯದಾಗಿ, ಕೆಲವು ಆಸ್ಪತ್ರೆಗಳಲ್ಲಿ ಅವರು ಸುದ್ದಿವಿಗಳು, ಇಬ್ಬಿಬ್ಬರು ವೈದ್ಯರಿದ್ದಾರೆ. ಚಿಕ್ಕ ಆಸ್ಪತ್ರೆಗಳಲ್ಲಿ ಇಬ್ಬರು ವೈದ್ಯರು ಇರುವುದನ್ನು ತೆಗೆದು ಒಬ್ಬರು ವೈದ್ಯರೂ ಇಲ್ಲದಿರುವ ಆಸ್ಪತ್ರೆಗಳಿಗೆ ಹಾಕಿಸಿಕೊಡಿ ಎಂದು ಹೇಳಿದ್ದೇನೆ. ಅದನ್ನಾದರೂ ಈಗ ಮಾಡಲಾದೀತೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಪ್ರಾಥಮಿಕ ಆರೋಗ್ಯ ಕೇಂದ್ರ, ಹಳ್ಳಿಹೊಳೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಳ್ಳೂರು ಇಲ್ಲಿ ತಲಾ ಒಂದೊಂದು ವೈದ್ಯರ ಹುದ್ದೆ ಖಾಲಿ ಇದೆ. ಪ್ರಾಥಮಿಕ ಆರೋಗ್ಯ ಘಟಕ ಹಾಲಾಡಿಯಲ್ಲಿ, ಶ್ರೀ ಮಾರಪ್ಪಯ್ಯರವರನ್ನು ನೇಮಿಸಿದ್ದು ೧೫-೬-೧೯೯೦ ರಿಂದ ಅವರು ಹಾಜರಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಬೈಂದೂರಿನಲ್ಲಿ ಒಂದು ಮಹಿಳಾ ವೈದ್ಯ ಹುದ್ದೆ ಖಾಲಿ ಇದೆ. ಈಗ ಶ್ರೀ ಆಚಾರ್ ಅವರು ಒಬ್ಬೊಬ್ಬ ವೈದ್ಯರನ್ನಾದರೂ ಹಾಕಿಕೊಡಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಹಾಕುವುದಕ್ಕೆ ಸಾಧ್ಯವಾದರೆ ಹಾಕಿಕೊಡಲಾಗುತ್ತದೆ.

ಶ್ರೀ ಜಿ.ಎಸ್. ಆಚಾರ್.—ಉತ್ತರ ಬರುವಾಗ ಏನಾಯಿತೋ ಗೊತ್ತಿಲ್ಲಿಲ್ಲ. 'ಹಾಲಾಡಿ' ನಾನು ಕೇಳಿಲ್ಲ, ಅದು ಹಕ್ಕಲಾಡಿ. ಹಾಲಾಡಿ ಎನ್ನುವುದು ಶ್ರೀ ಪ್ರತಾಪಚಂದ್ರಶೆಟ್ಟಿ ಅವರ ಕ್ಷೇತ್ರ. ಆದ್ದರಿಂದ ಡಾಕ್ಟರನ್ನು ಹಾಕಿಕೊಡುವಾಗ ಹಕ್ಕಲಾಡಿ ಎಂದು ನೆನಪಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಆಗಬಹುದು.

ಖಾಸಗಿ ವೈದ ಮಹಾ ವಿದ್ಯಾಲಯಂಗಳಲ್ಲಿ ಹೆಚ್ಚಿನ ಬೋಧನಾ ಶುಲ್ಕ ವಸೂಲಾತಿ ಬಗ್ಗೆ

೮೧. ಶ್ರೀ ಎಂ.ಪಿ. ವೆಂಕಟಪ್ಪ (ಮಂಳಬಾಗಿಲು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ವೈದ್ಯ ಕಾಲೇಜುಗಳಲ್ಲಿ ಬೋಧನಾ ಶುಲ್ಕವನ್ನು ಹೆಚ್ಚಾಗಿ ವಸೂಲಿ ಮಾಡುತ್ತಿರುವ ದೂರುಗಳು ಬಂದಿವೆಯೇ?

ಆ) ಹಾಗಿದ್ದಲ್ಲಿ ಬೋಧನಾ ಶುಲ್ಕವನ್ನು ಪುನರ್ ವಿಮರ್ಶೆ ಮಾಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ?

ಇ) ಈಗಾಗಲೇ ಖಾಸಗಿ ಕಾಲೇಜುಗಳು ಬೋಧನ ಶುಲ್ಕವನ್ನು ವಸೂಲಿ ಮಾಡಿದಿದ ರೆ ಅದನ್ನು ವಾಪಸು ಮಾಡಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು.)

ಅ) ಇಲ್ಲ

ಆ) ಪರಿಶೀಲನೆಯಲ್ಲಿ ಇದೆ.